ಅನುಬಂಧ - ಆ

ವಾಹನಗಳ ಕಳ್ಳತನವನ್ನು ತಡೆಗಟ್ಟಲು ಕೈಗೊಂಡ ಕ್ರಮಗಳು ಈ ಕೆಳಗಿನಂತಿವೆ :

1. ವಾಹನಗಳನ್ನು ನಿಗದಿಪಡಿಸಿದ ನಿಲುಗಡೆ ಸ್ಥಳದಲ್ಲಿಯೇ ನಿಲ್ಲಿಸಲು ಸೂಕ್ತ ಕ್ರಮ ಕೊಗೊಳ್ಳಲಾಗುತ್ತಿದೆ.
2. ಸದ್ರಿ ನಿಲುಗಡೆ ಸ್ಥಳಗಳಲ್ಲಿ ಮುನಸಿಪಾಲ್ಟಿ ಅಥವಾ ಕಾರ್ಪೋರೇಷನಗಳ ಮೂಲಕ ಟೋಕನ್ ವ್ಯವಸ್ಥೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
3. ಅಪರಾಧ ವಿಭಾಗದ ಕಾನಸ್ಟೇಬಲ್‌ಗಳು ನಾಗರಿಕ ವಸ್ತ್ರಗಳಲ್ಲಿ ಗೌಪ್ಯವಾಗಿ ಸಂಚರಿಸಿ ಸಾರ್ವಜನಿಕ ಸ್ಥಳಗಳಲ್ಲಿ ವಾಹನ ಕಳ್ಳತನ ಮಾಡುವವರ ಮೇಲೆ ನಿಗಾ ಇಟ್ಟು ಅವರ ಚಟುವಟಿಕೆಗಳನ್ನು ಗಮನಿಸುವುದಕ್ಕಾಗಿ ನೇಮಿಸಲಾಗುತ್ತಿದೆ.
4. ಕಳುವಾದ ವಾಹನಗಳನ್ನು ಪಡಿಯುವವರನ್ನು ಆಗಿಂದಾಗ್ಗೆ ತಪಾಸಣೆ ಮಾಡಲಾಗುತ್ತಿದೆ.
5. ರಾಜ್ಯದ ಹಾಗೂ ಗಡಿ ಪ್ರದೇಶದ ಸಿಬ್ಬಂದಿಗಳಿಗೆ ವಾಹನ ಕಳ್ಳತನಗಳ ಬಗ್ಗೆ ನಿಗಾ ವಹಿಸಿ ಗಮನಿಸುವಂತೆ ಎಚ್ಚರಿಸಲಾಗುತ್ತಿದೆ.
6. ತಮ್ಮ ವಾಹನಗಳ ಬಗ್ಗೆ ಎಚ್ಚರಿಕೆ ವಹಿಸಿ ಅವುಗಳಿಗೆ ಸೂಕ್ತ ಬೀಗದ ವ್ಯವಸ್ಥೆ ಮಾಡುವಂತೆ ವಾಹನಗಳ ಮಾಲೀಕರಿಗೆ ತಿಳಿಸುವ ಪ್ರಕಟಣೆಗಳನ್ನು ಹೊರಡಿಸಲಾಗುತ್ತಿದೆ.

ಕೆ.ಎಸ್.ಆರ್.ಟಿ.ಸಿ ಸಂಸ್ಥೆಗೆ ಹೊಸಬಸ್ಸಗಳನ್ನು ಖರೀದಿಸಲು ಧನ ಸಹಾಯ

1998 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಇರತಕ್ಕ ಹಳೆಯ ಬಸಗಳ ಸಂಖ್ಯೆ ಎಷ್ಟು?

ಆ) ಈ ಹಳೆಯ ಬಸ್ಸುಗಳನ್ನು ಹೊಸ ಬಸ್ಸುಗಳಿಂದ ಬದಲಾಯಿಸಲು ಉದ್ದೇಶಿಸಲಾಗಿದೆಯೇ?

ಇ) ಹಾಗಿದ್ದಲ್ಲಿ ಇದಕ್ಕೆ ತಗಲುವ ವೆಚ್ಚ ಎಷ್ಟು?

ಈ) ಎಷ್ಟು ಹೊಸ ಬಸಗಳನ್ನು ಈ ಉದ್ದೇಶಕ್ಕಾಗಿ ಖರೀದಿಸಲಾಗುವುದು?

ಉ) ಇದಕ್ಕಾಗಿ ಒಂದನ್ನೇ ಹಂತದಲ್ಲಿ ಸಹಾಯಧನ ನೀಡಬೇಕೆಂದು ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಸರ್ಕಾರವನ್ನು ಕೋರಿದೆಯೇ?

ಊ) ಹಾಗಿದ್ದಲ್ಲಿ, ಸರ್ಕಾರ ಇದರ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ನಿಗಮದಲ್ಲಿ 1995-96ನೇ ಸಾಲಿನ ಕಾರ್ಯಯೋಜನೆಯ ಪ್ರಕಾರ 1076 ಹಳೆ ವಾಹನಗಳನ್ನು ಬದಲಾವಣೆಗಾಗಿ ಗುರ್ತಿಸಿದೆ.

ಆ) ಹೌದು, ನಿಗಮದ ಪ್ರತಿ ವರ್ಷ ಕಾರ್ಯ ಯೋಜನೆಯನ್ನು ರೂಪಿಸಲಾಗುತ್ತಿದ್ದು, ಅದರಂತೆ 1000 ವಾಹನಗಳನ್ನು ಮಾರ್ಚ್ 1996ರ ಒಳಗಾಗಿ ಬದಲಾಯಿಸಲಾಗುವುದು. ನಿಗಮದ ಈಗಾಗಲೇ 533 ವಾಹನಗಳನ್ನು ಬದಲಾಯಿಸಲಾಗಿದ್ದು ಉಳಿದ ವಾಹನಗಳನ್ನು 1996ನೇ ಮಾರ್ಚ ಒಳಗಾಗಿ ಹಂತಹಂತವಾಗಿ ಬದಲಾಯಿಸಲಾಗುವುದು.

ಇ) 1000 ಬಸಗಳನ್ನು ಬದಲಾಯಿಸಲು ಅಂದಾಜು ಮಾಡಿರುವ ವೆಚ್ಚ 6490.00 ಲಕ್ಷ ರೂಪಿಯಗಳು.

ಈ) ಈ ಉದ್ದೇಶಕ್ಕಾಗಿ 1000 ಬಸಗಳನ್ನು ಖರೀದಿಸಲು ಉದ್ದೇಶಿಸಲಾಗಿದೆ.

ಉ) ಹೌದು.

ಊ) ಸರ್ಕಾರವು 15 ಲಕ್ಷ ರೂ.ಗಳ ಅನುದಾನ ಒದಗಿಸಿರುತ್ತದೆ.

ರಸ್ತೆ ಸಾರಿಗೆ ಸಂಸ್ಥೆಯು ಖಾಸಗಿ ಬಸ್ಸುಗಳ ನೆರವನ್ನು ಪಡೆಯುವ ಬಗ್ಗೆ

1999 - ಶ್ರೀ ಕೃಷ್ಣಪ್ಪ (ಜಯಮಹಾಲ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಪ್ರತಿದಿನ ಓಡುತ್ತಿರುವ ಬಸಗಳ ಸಂಖ್ಯೆ ಎಷ್ಟು ;

ಆ) ಇವುಗಳ ಪೈಕಿ ಎಷ್ಟು ಬಸಗಳು ಬೆಂಗಳೂರು ನಗರ ಸಾರಿಗೆ ವಿಭಾಗದಲ್ಲಿ ಓಡುತ್ತಿದೆ;

ಇ) ಖಾಸಗಿ ಬಸ್ಸುಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದುಕೊಂಡು ಓಡಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಈ) ಬೆಂಗಳೂರು ನಗರದಲ್ಲಿ ಬೇರೆ ಊರುಗಳಿಂದ ವಾಪಸ್ ಬಂದ ಬಸ್ಸುಗಳನ್ನು ಪೀಕ್ ಅವರನಲ್ಲಿ ನಗರ ಸಾರಿಗೆ ಬಸ್ಸುಗಳಾಗಿ ಓಡಿಸಲು ಸರ್ಕಾರ ಉದ್ದೇಶಿದೆಯೇ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) 9088 ಬಸ್ಸುಗಳು (19-8-1995ರಂದು)

ಆ) 1758 ಬಸ್ಸುಗಳು.

ಇ) ಬೆಂಗಳೂರು ನಗರದಲ್ಲಿ 400 ಖಾಸಗಿ ಬಸ್ಸುಗಳನ್ನು ಬಾಡಿಗೆಗೆ ಪಡೆಯಲು ಉದ್ದೇಶಿಸಲಾಗಿದೆ.

ಈ) ಪ್ರಸ್ತುತ ಬೆಂಗಳೂರು ನಗರದಲ್ಲಿ ಇಂತಹ 25 ಬಸ್ಸುಗಳನ್ನು ಆಚರಣೆ ಮಾಡಲಾಗುತ್ತಿದೆ.

ವಿಧಾನ ಮೂಶಾಸನ ಹಾಗೂ ವೃದ್ಧಾಪ್ಯ ವೇತನ

2002 - ಶ್ರೀ ಬಿ. ಮುನಿಯಪ್ಪ (ಗಾಂಧಿನಗರ) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?